(ಇ) ಹಾಗಿದ್ದಲ್ಲಿ, ಕಾಲೇಜಿಂ ಸಿಬ್ಬಂದಿ ವರ್ಗಕ್ಕೆ ಬಡ್ತಿ, ಕಾಲಮಿತಿ ಬಡ್ತಿ ಪಗೈರೆ ಕೊಡುತ್ತಿದ್ದ ಪಕ್ಷಕ್ಕೆ ಚಿಕ್ಕಬಳ್ಳಾಪುರದ ಪುರಸಭಾ ಪ್ರಥಮ ದರ್ಜೆ ಕಾಲೇಜು ವಿಚಾರದಲ್ಲಿ ಯಾವ ರೀತಿಯ ಕ್ರಮ ಅನುಸರಿಸಲಾಗಿದೆ ;

(ಈ) ಮೇಲ್ಕಂಡ ಕಾಲೇಜುಗಳ ಪ್ರಿನ್ಸಿಪಾಲರಿಗೆ ಬಡ್ತಿ, ವಾರ್ಷಿಕ ಬಡ್ತಿಯ ಮಂಜೂರಾತಿಯನ್ನು ಆಯಾ ಕಾಲೇಜಿನ ಪ್ರಿನ್ಸಿಪಾಲರೇ ಮಾಡಿಕೊಳ್ಳಬಹುದೆ ಅಥವಾ ಆಡಳಿತ ಮಂಡಳಿಯು ಒಪ್ಪಿಗೆಯ ಮೇರೆಗೆ ಕಾಲೇಜಿನ ಶಿಕ್ಷಣ ನಿರ್ದೇಶಕರು ಮಾಡುತ್ತಾರೆಯೆ ಎಂಬುದನ್ನು ಸರ್ಕಾರದವರು ತಿಳಿಸುವರೆ ?

ಶ್ರೀ ಬಿ. ರಾಚಯ್ಯ (ವಿದ್ಯಾ ಮಂತ್ರಿಗಳು).—

(ಅ) ಅನುದಾನ ಪಡೆಯುವ ಖಾಸಗಿ ಅಥವಾ ಪುರಸಭಾ ಕಾಲೇಜುಗಳಿಗೆ ಸಂಬಂಧಿಸಿದಂತೆ ಪದೋನ್ನತಿಗಳನ್ನು ಮಾಡುವಾಗ ಈ ಇಲಾಖೆಯು ಸಂಬಂಧಿಸಿದ ಕಾಲೇಜುಗಳ ಆಡಳಿತ ಮಂಡಳಿಗಳು ಪ್ರಾಂಶುಪಾಲರ ಮೂಲಕ ಕಳುಹಿಸಿದ ಶಿಫಾರಸುಗಳನ್ನು ಕಾಲಕಾಲಕ್ಕೆ ಬಂದ ಸರ್ಕಾರದ ಆದೇಶಗಳ ರೀತ್ಯ ಪರಿಶೀಲಿಸಿ ರೋಸ್ಟರ ಪದ್ಧತಿಗೆ ಅನುಗುಣವಾಗಿ ಅನುಮೋದಿಸುತ್ತದೆ.

ಖಾಸಗಿ ಅನುದಾನ ಪಡೆಯುವ ಕಾಲೇಜುಗಳ ನೌಕರರಿಗೆ ಕಾಲಮಿತಿ ಪದೋನ್ನತಿ ನೀಡಲು ಅವಕಾಶಗಳಿಲ್ಲ, ಆದರೆ ಕಾಲಮಿತಿ ಬಡ್ತಿಯನ್ನು ನಿಯಮಗಳ ಅನುಸಾರವಾಗಿ ಕೊಡಲಾಗುವುದು.

(ಆ) ಹೌದು.

(ಇ) ಆ ಪ್ರಶ್ನೆಗೆ ನೀಡಿರುವ ಉತ್ತರವು ಇದಕ್ಕೂ ಅನ್ವಯಿಸುತ್ತದೆ.

(ಈ) ಮೇಲಿನ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಆಡಳಿತ ಮಂಡಲಿಯು ಮಂಜೂರು ಮಾಡಿದ ಪದೋನ್ನತಿಯನ್ನು ಹಾಗೂ ವಾರ್ಷಿಕ ವೇತನ ಬಡ್ತಿಯನ್ನು ಈ ಇಲಾಖೆಯು ನಿಯಮಾನುಸಾರ ಅನುಮೋದಿಸುತ್ತದೆ.

Rate of Commission Payable to the Milk Vendors

495 (1377) Sri S. K. KANTHA (Gulbarga) Will the Minister for Animal Husbandry Vertrnary Service and Horticulture be pleased to state that:

a) Wheher it is a fact that the milk vendors of Government. Dairies of Gulbarga, Belgaum, Mysore, Hubli, Dharwad, Shimoga and Bhadravthi were getting the commission at 3% on the sale of milk.

b) Whether it is a fact that Government have recently reduced the Commission to 2%.

c) If so, whether the Government would take action to restore the original rate of Commission of 3% ?

SHRI. VISWANATHAREDDY MUDNAL (Minister for Animal Husbandry and Horticulture).—

a) Yes.

b) No. However the Commission fixed with effect from 5-1-1984 is at the rate of Rs. 0.06 per litre.

c) No.